ಕನ್ನಡಪ್ರಭ

# ಮೀನಾಕ್ಷಿ ದಾಖಲೆ



**ಬೆಂಗಳೂರು:** ನಗರದ ಜೈನ್ ವಿಶ್ವವಿದ್ಯಾಲಯ ಆಶ್ರಯದಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ್ ವಿಶ್ವವಿದ್ಯಾಲಯ ಈಜು ಚಾಂಪಿಯನ್‌ಶಿಪ್‌ನಲ್ಲಿ ಜೈನ್ ವಿವಿಯ ಈಜುಪಟು ಮೀನಾಕ್ಷಿ ವಿ.ಕೆ.ಆರ್ ನೂತನ ದಾಖಲೆ ನಿರ್ಮಿಸಿ ಚಿನ್ನದ ಪದಕ ಪಡೆದಿದ್ದಾರೆ.

ಚಾಂಪಿಯನ್‌ಶಿಪ್‌ನ 2ನೇ ದಿನವಾದ ಸೋಮವಾರ ನಡೆದ ಮಹಿಳೆಯರ 400 ಮೀಟರ್ ಮೆಡ್ಲೆಯಲ್ಲಿ ಮೀನಾಕ್ಷಿ, 5:21:13 ನಿಮಿಷಗಳಲ್ಲಿ ಗುರಿ ತಲುಪುವ ಮೂಲಕ ಅಗ್ರಸ್ಥಾನ ಪಡೆದರು.

ಈ ಮೂಲಕ ಮೀನಾಕ್ಷಿ ಹೊಸ ದಾಖಲೆ ನಿರ್ಮಿಸಿದರು. ಈ ಹಿಂದೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪೂಜಾ ಆಳ್ವಾ ಅವರ 5:25:80 ನಿಮಿಷದ ದಾಖಲೆಯನ್ನು ಹಿಂದಿಕ್ಕಿದರು.

ಇದೇ ವಿಭಾಗದಲ್ಲಿ ಜೈನ್ ವಿವಿಯ ಮತ್ತೊಬ್ಬ ಈಜುಪಟು ಪೂರ್ವಾ ಕಿರಣ್ ಶೆಟ್ಟಿ 5:41:35 ನಿಮಿಷದೊಂದಿಗೆ ಬೆಳ್ಳಿ ಪದಕ ಪಡೆದರೆ, ಕಲ್ಲಿಕೋಟೆ ವಿವಿಯ ಅಂಜನಾ ಮೋಹನ್ 5:43:56 ನಿಮಿಷದಲ್ಲಿ ಗುರಿ ತಲುಪಿ ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಇನ್ನು ಪುರುಷರ 400 ಮೀಟರ್ ಮೆಡ್ಲೆಯಲ್ಲಿ ವಿಟಿಯುನ ಅರವಿಂದ್ ಎಂ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ. 4:45:86 ನಿಮಿಷದಲ್ಲಿ ಗುರಿ ತಲುಪಿದ ಅರವಿಂದ್ ಅಗ್ರಸ್ಥಾನ ಪಡೆದರು. ಸಾವಿತ್ರಿಭಾಯ್ ಪುಲೆ ಪುಣೆ ವಿವಿಯ ವಿರಾಜ್ ಧೋಖಲೆ ಬೆಳ್ಳಿ ಹಾಗೂ ಗುಜರಾತ್‌ನ ಭನವಾದಿಯಾ ರಾಜ್ ಸಂಜಯ್ ಕಂಚು ಪಡೆದರು.

ಮಹಿಳೆಯರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಮಿಂಚು ಹರಿಸಿದ ಜೈನ್ ವಿವಿಯ ಪೂರ್ವಾ ಕಿರಣ್ ಶೆಟ್ಟಿ, 36:41 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಬಾಚಿಕೊಂಡರು. ನಂತರದ ಸ್ಥಾನದಲ್ಲಿ ದೆಹಲಿ ವಿವಿಯ ಪ್ರಿಯಾಂಕ ಬೆಳ್ಳಿ ಹಾಗೂ ಬೆಳಗಾವಿಯ ವಿಟಿಯುನ ದಿವ್ಯಾ ಗುರುಸ್ವಾಮಿ ಕಂಚಿನ ಪದಕ ಪಡೆದರು.

ಮಹಿಳೆಯರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ ಜೈನ್ ವಿವಿಯ ಮೀನಾಕ್ಷಿ ಎರಡನೇ ಚಿನ್ನದ ಪದಕ ಪಡೆದರು. 2:15:09 ನಿಮಿಷದಲ್ಲಿ ಗುರಿ ಸೇರಿದ ಮೀನಾಕ್ಷಿ ಅಗ್ರ ಸ್ಥಾನ ಪಡೆದರೆ, ಆರ್ ಜಿಯುಎಚ್‌ಎಸ್ ವಿವಿಯ ಸ್ನೇಹ ಟಿ ಬೆಳ್ಳಿ ಹಾಗೂ ಕೇರಳ ವಿವಿಯ ಸಂಧ್ಯಾ ಕಂಚು ಪಡೆದರು. ಇನ್ನು ಡೈವಿಂಗ್ ಹೈ ಬೋರ್ಡ್ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಡಿಎವಿವಿಯ ಗೌರವ್ ರಘುವಂಶಿ ಚಿನ್ನ, ಕೆತನ್ ಶಿಂಧೆ ಬೆಳ್ಳಿ ಹಾಗೂ ಉದಿತ್ ಮಿಶ್ರಾ ಕಂಚಿನ ಪದಕ ಪಡೆದರು.

## ಎರಡನೇ ದಿನದ ಫಲಿತಾಂಶ

### ಪುರುಷರ ವಿಭಾಗ

50 ಮೀ. ಬ್ರೆಸ್ಟ್‌ಸ್ಟ್ರೋಕ್- 1.ಜಷನ್‌ದೀಪ್ ಸಿಂಗ್, 2.ಪುಲ್‌ಕಿತ್, 3.ಅಮನ್ ಘಾಯ್, (29.83).

200 ಮೀ. ಫ್ರೀಸ್ಟೈಲ್- 1.ಅಮನ್ ಘಾಯ್, 2.ಸಂಜಯ್ ರಾಜ್, 3. ಯುಗೇಶ್ ಕುಮಾರ್, (2:00.61).

400 ಮೀ. ಮೆಡ್ಲೆ- 1.ಅರವಿಂದ ಎಂ (ವಿಟಿಯು), 2.ವಿರಾಜ್ ಧೋಖಲೆ, 3.ಸಂಜಯ್ ರಾಜ್, (4:45.86).

### ಮಹಿಳೆಯರ ವಿಭಾಗ

50 ಮೀ. ಬ್ರೆಸ್ಟ್‌ಸ್ಟ್ರೋಕ್- 1.ಪೂರ್ವಾ ಶೆಟ್ಟಿ (ಜೈನ್ ವಿವಿ), 2.ಪ್ರಿಯಾಂಕ, 3.ದಿವ್ಯಾ ಗುರುಸ್ವಾಮಿ (ವಿಟಿಯು), (36.41).

200 ಮೀ. ಫ್ರೀಸ್ಟೈಲ್-1.ಮೀನಾಕ್ಷಿ (ಬೆಂಗಳೂರು ಜೈನ್ ವಿವಿ), 2.ಸ್ನೇಹಾ ಟಿ, 3.ಸಂಧ್ಯಾ ಎಸ್, (2:15.09).

400 ಮೀ. ಮೆಡ್ಲೆ- 1.ಮೀನಾಕ್ಷಿ (ಜೈನ್ ವಿವಿ), 2.ಪೂರ್ವಾ ಶೆಟ್ಟಿ (ಜೈನ್ ವಿವಿ), 3.ಅಂಜನಾ ಮೋಹನ್, (5:21.13).

800 ಮೀ. ಫ್ರೀಸ್ಟೈಲ್- 1.ಸ್ನೇಹ ಟಿ, 2.ಪ್ರತಿಮಾ ಕೊಲ್ಲಾಳಿ, 3.ಪೂರ್ವಾ ಶೆಟ್ಟಿ (ಜೈನ್ ವಿವಿ), (9:59.00).

### ಡೈವಿಂಗ್

ಪುರುಷರ ವಿಭಾಗ: 1.ಗೌರವ್ ರಘುವಂಶಿ, 2. ಕೆತನ್ ಶಿಂಧೆ, 3.ಉದಿತ್ ಮಿಶ್ರಾ, (239.20 ಅಂಕ)

ಮಹಿಳೆಯರ ವಿಭಾಗ: 1.ಸ್ವಾತಿ ವಿದಾಪ್, 2.ತನುಕಾ ಧರಾ, 3.ಗರಿಮಾ ಕಪೂರ್, (147.50 ಅಂಕ)